## ಹಾಡುಗಳ ಆಯ್ಕೆ ಅಸಮಂಜಸ




ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮ ಈ ವಾರ ರಾಯಚೂರಿನ ಸಿಂಧನೂರಿನಲ್ಲಿ ಅಪಾರ ಜನಸ್ತೋಮದ ಮಧ್ಯ ನೆರವೇರಿತು. ಗಾಯಕರು ಮಂತ್ರಾಲಯಕ್ಕೆ ಹೋಗಿ ರಾಯರ ಹಾಡನ್ನು ಭಕ್ತಿ ಪೂರ್ವಕವಾಗಿ ಗುರುಗಳ ಸಾನ್ನಿಧ್ಯದಲ್ಲಿ ಪ್ರಸ್ತುತ ಪಡಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದ ಸ್ಪರ್ಧಿಗಳು ಹಾಗೂ ಭರ್ಜರಿ ಬ್ಯಾಚುಲರ್ಸ್ ಕಲಾವಿದರು ಸೇರಿ ರೂಪಿಸಿದ ನೃತ್ಯ ಹಾಗೂ ಗಾಯನ ಮನೋಹರವಾಗಿತ್ತು.

ರಂಗು ರಂಗಿನ ವೇದಿಕೆ, ಕಣ್ಣು ಕೊರೈಸುವ ವಸ್ತ್ರವಿನ್ಯಾಸ, ವಾದ್ಯಗೋಷ್ಠಿ ಮನಸೂರೆಗೊಂಡಿತು. ಜನಪದ ಕಲಾವಿದ ಬಾಳು ಬೆಳಗುಂದಿ, ಗಾಯಕ ದ್ಯಾಮೇಶ ಅವರಿಗೆ ಅಭಿಮಾನಿಗಳು ಗೌರವ ಅರ್ಪಿಸಿದ್ದು ಹೆಮ್ಮೆ ಮೂಡಿಸಿತು. ಇಷ್ಟೆಲ್ಲ ವೈಭವದಿಂದ ಕೂಡಿದ್ದರೂ ಹಾಡುಗಳ ಆಯ್ಕೆ ಅಷ್ಟು ಸಮಂಜಸ ಅನ್ನಿಸಲಿಲ್ಲ. ನಿರೂಪಕಿಯ ಆರ್ಭಟವೇ ಜೋರಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಬೊಂಬಾಟ್ ಭೋಜನದಲ್ಲಿ ಇಂಗ್ಲಿಷ್ ಕಲ್ಲು

ಮೊನ್ನೆ ಮೊನ್ನೆಯವರೆಗೂ ಸಿಹಿಕಹಿ ಚಂದ್ರು ಅವರ 'ಬೊಂಬಾಟ್ ಭೋಜನ' ಖುಷಿ ತರುತ್ತಿತ್ತು. ಆದರೆ ಇತ್ತೀಚೆಗೆ ಈ ಕಾರ್ಯಕ್ರಮ ಸಂಪೂರ್ಣ ಕಂಗ್ಲೀಷ್ ತುಂಬಿದ್ದು ಕನ್ನಡ ಪದಗಳನ್ನು ಹುಡುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಬೇರೆ ಬೇರೆ ನಗರಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದೂ ಚೆನ್ನಾಗಿದೆ. ಅದರಲ್ಲಿ ಸಾಮಾನ್ಯವಾಗಿ ಮಹಿಳಾ ಸಂಘ ಅಥವಾ ಕ್ಲಬ್ ಸದಸ್ಯೆಯರು ಭಾಗವಹಿಸುತ್ತಾರೆ. ಶೋಚನೀಯ ಎಂದರೆ ಅಲ್ಲಿ ಭಾಗವಹಿಸುವ ಮಹಿಳೆಯರು ಇಂಗ್ಲಿಷಿನಲ್ಲಿ ಮಾತನಾಡುವುದೇ ತಮ್ಮ ಪ್ರತಿಷ್ಠೆ ಎಂಬಂತೆ ವರ್ತಿಸುತ್ತಾರೆ. ಅವರು ಚಂದ್ರು ಕುರಿತು ವಾಚಿಸುವ ಕವನಗಳು ಇಂಗ್ಲಿಷ್‌ನಲ್ಲಿಯೇ ಇರುತ್ತವೆ. ನಿರೂಪಕರೂ ಈಚೆಗೆ ಮಿತಿ ಮೀರಿದ ಇಂಗ್ಲಿಷ್ ಪದಗಳನ್ನು ಬಳಸುತ್ತಿದ್ದಾರೆ. ತಾವೇ ಮಾಡಿದ ಪಾಕವನ್ನು ತಾವೇ ಹೊಗಳುವುದು ಮುಜುಗರ ಉಂಟುಮಾಡುತ್ತದೆ. ಚಿತ್ರ ವಿಚಿತ್ರ ಹೆಸರಿನಲ್ಲಿ ಅಡುಗೆ ವೈವಿಧ್ಯಕ್ಕೂ ಇಂಗ್ಲಿಷ್ ನಾಮಕರಣ ಮಾಡುತ್ತಿದ್ದಾರೆ. ಅದಕ್ಕೆ ಕನ್ನಡದ ಸೊಗಡಿನ ಹೆಸರಿಟ್ಟರೆ ಅದರ ಸೊಗಸು ಇನ್ನೂ ಹೆಚ್ಚಾದೀತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಬಡವರ ಮನೆ ಹುಡುಗಿಗೆ ದನಿಯಿಲ್ಲವೆ?

ಕಲರ್ಸ್ ಕನ್ನಡದ 'ಮುದ್ದುಸೊಸೆ' ಮಂಡ್ಯ ಜಿಲ್ಲೆಯ ನಿಸರ್ಗ ಸೌಂದರ್ಯ ಮತ್ತು ಅಲ್ಲಿಯ ಜನಜೀವನವನ್ನು ಚೆನ್ನಾಗಿ ಕಟ್ಟಿಕೊಟ್ಟಿದೆ. ಗೌಡರ ಮನೆತನಕ್ಕೆ ಸೇರಿದ ನಾಯಕ ಪಿಯುಸಿ ಓದುತ್ತಿರುವ ವಿದ್ಯಾ ಎಂಬ ಹುಡುಗಿಯನ್ನು ಪ್ರೀತಿಸುತ್ತಾನೆ. ಅವಳ ಜೊತೆ ಮದುವೆಯೂ ನಿಶ್ಚಯವಾಗುತ್ತದೆ. ವಿದ್ಯಾಳಿಗೆ ತನ್ನ ಓದನ್ನು ಮುಂದುವರಿಸುವ ಆಸೆ ಇರುವುದರಿಂದ ಆ ಮದುವೆ ಅವಳಿಗೆ ಇಷ್ಟವಿರುವುದಿಲ್ಲ. ಆ ಕಾರಣಕ್ಕೆ ಪೊಲೀಸ್ ಸ್ಟೇಷನಿಗೆ ಫೋನ್ ಮಾಡಿ ಮದುವೆ ನಿಲ್ಲಿಸುವಂತೆ ಮಾಡುತ್ತಾಳೆ. ಬಾಲ್ಯವಿವಾಹ ತಡೆ ಕಾಯ್ದೆಯ ಅಡಿ ನಾಯಕನ ತಂದೆಯನ್ನು ಬಂಧಿಸುತ್ತಾರೆ. ವಿದ್ಯಾಳೆ ಈ ಎಲ್ಲ ಬೆಳವಣಿಗೆಗೆ ಕಾರಣ ಎಂದು ಅರಿಯದ ನಾಯಕ ತನ್ನ ತಂದೆಯನ್ನು ಜೈಲಿಗೆ ಹೋಗುವಂತೆ ಮಾಡಿದವರನ್ನು ನಾನು ಸುಮ್ಮನೆ ಬಿಡಲಾರೆ ಎಂದು ಹೇಳುತ್ತಾನೆ.

ಇದೆಲ್ಲಾ ನಡೆದ ಕೆಲವು ದಿವಸಗಳ ನಂತರ ಮದುವೆಗೆ ಸಿದ್ಧಳಾಗು ಅಮ್ಮಿ ಎಂದು ನಾಯಕ ವಿದ್ಯಾಳಿಗೆ ಹೇಳುವುದು ಸರಿಯೇ? ಧನಿಕರ ಮನೆಯ ಹುಡುಗ ಬಡವರ ಮನೆಯ ಹುಡುಗಿಯನ್ನು ಪ್ರೀತಿಸಿದರೆ ಅವಳಿಗೆ ಇಷ್ಟವಿಲ್ಲದಿದ್ದರೂ ಮದುವೆಯಾಗಬೇಕೆ ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ.

—ಮುರಳೀಧರ ಕುಲಕರ್ಣಿ, ಬೀದರ್

## 'ಹೊಸ ಕಥೆ'ಯ ಕುತೂಹಲ

ಕಲರ್ಸ್ ಕನ್ನಡ ವಾಹಿನಿಯಲ್ಲಿ 'ಹೊಸಕತೆ ನಿರೀಕ್ಷಿಸಿ ಶೀಘ್ರದಲ್ಲಿ' ಎಂಬ ಪ್ರಕಟಣೆ ಬಂದಾಗಲೆಲ್ಲಾ ಯಾವ ಧಾರಾವಾಹಿಯನ್ನು ಮುಗಿಸಬಹುದು ಎಂಬ ಕುತೂಹಲ ನಮ್ಮಲ್ಲಿ ಮೂಡುತ್ತದೆ. 'ರಾಮಾಚಾರಿ'ಯಂತೂ ಅಜೇಯ ಎಂಬುದು ನಮ್ಮ ಅನುಭವದ ಸತ್ಯ. ದಿನಕ್ಕೆ ಒಂದು ಗಂಟೆಯ ಕಾಲ ಪ್ರಸಾರ ಮಾಡುತ್ತಿರುವ 'ಯಜಮಾನ'ನಿಗೆ ಕತ್ತರಿ ಬೀಳಬಹುದು ಎಂಬುದು ನಮ್ಮ ಊಹೆ. ಸಂಪಂಗಿ, ಸರಸರ ಆಟವನ್ನು ಅರ್ಧ ಗಂಟೆ ನೋಡುವುದಕ್ಕೆ ಹಿಂಸೆ ಆಗಿರುವಾಗ ಒಂದು ಗಂಟೆ ಪ್ರಸಾರ ಮಾಡುವುದು ನಮ್ಮ ತಾಳ್ಮೆಗೆ ಸವಾಲೆನಿಸುತ್ತದೆ. ಪ್ರಸಾರದ ಸಮಯವನ್ನು ಅರ್ಧ ಗಂಟೆಗೆ ಸೀಮಿತಗೊಳಿಸಿ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಲಕ್ಷ್ಮೀಯ ಕರುಣಾಜನಕ ಕತೆ

ಝೀ ಕನ್ನಡ 'ಲಕ್ಷ್ಮೀ ನಿವಾಸ'ದಲ್ಲಿ ಚಿನ್ನುಗೆ ನೆಮ್ಮದಿ ಇಲ್ಲದಂತೆ ಮಾಡಿರುವುದನ್ನು ನೋಡಲು ತುಂಬ ಕಿರಿಕಿರಿ. ಆಕೆಗೂ ಒಂದು ನೆಮ್ಮದಿಯ ಬದುಕು ಬೇಕು ಅನ್ನಿಸಿದ್ದು ಸಹಜ. ಆದರೆ ಪೋಷಕರು ಹೇಗೆ ತಾವು ಹೆತ್ತ ಮಕ್ಕಳಿಗೆ ಬೇಡ ಆಗುತ್ತಿದ್ದಾರೆ ಎನ್ನುವ ವಾಸ್ತವವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುವ ಸನ್ನಿವೇಶ ತುಂಬ ಚೆನ್ನಾಗಿ ಮೂಡಿಬಂತು. ಮಕ್ಕಳು ತಂದೆ ತಾಯಿಯನ್ನು ಮನೆಯಿಂದ ಹೊರ ಹಾಕುವ ಮಾತನ್ನು ಆಡುತ್ತಾರೆ. ಆಗ ಲಕ್ಷ್ಮೀ ಮತ್ತು ಆಕೆಯ ಯಜಮಾನ ದುಃಖದ ಕಡಲಲ್ಲಿ ಮುಳುಗುತ್ತಾರೆ. ಅವರ ಮೌನವನ್ನೇ ಸಮ್ಮತಿ ಎಂದು ದೂರ ತಳ್ಳಲು ಸಜ್ಜಾಗುವ ಸನ್ನಿವೇಶ ಕರುಣಾಜನಕ ಎಂದು ಅನ್ನಿಸಿತು.

—ಸುಮಾ, ಬೆಂಗಳೂರು

## ಕಥೆಗೆ ಖಳನಾಯಕಿ ಕಂಟಕ ಆಗದಿರಲಿ

ಉದಯದ 'ನಾತಿಚರಾಮಿ' ಧಾರಾವಾಹಿಯಲ್ಲಿ ಮನೆ ಕೆಲಸದಲ್ಲಿ ಭಕ್ತಿ ಮೊದಲ ದಿನವೇ ಸೈ ಅನ್ನಿಸಿಕೊಳ್ಳುತ್ತಾಳೆ. ಮನೆ ಮಂದಿಯ ಇಷ್ಟದಂತೆ ಅಡುಗೆಯನ್ನು ಮಾಡುತ್ತಾಳೆ. ಮನೆಗೆ ಬಂದ ಮರುದಿನ ಬೆಳಿಗ್ಗೆ ತಿಂಡಿಗೆ ಪೂರಿ ಸಾಗು, ನೀರುದೋಸೆ ಚಟ್ನಿ, ಬಿಸಿಬೇಳೆ ಬಾತ್ ಹೀಗೆ ನಾನಾ ಬಗೆಯ ಅಡುಗೆ ಮಾಡಿರುತ್ತಾಳೆ. ಆಕೆಯ ಚಿಕ್ಕತ್ತೆ ಮಾತ್ರ ಪೂರ್ವಗ್ರಹಪೀಡಿತಳಾಗಿ ಬರ್ಗರ್ ತರಿಸಿಕೊಂಡು ತಿನ್ನುತ್ತಾಳೆ. ಮಾತ್ರವಲ್ಲ, ಮನೆಯ ಸೊಸೆ ಭಕ್ತಿಗೆ ಕಾಟ ಕೊಡಲು ಸಿದ್ಧವಾಗುತ್ತಿದ್ದಾಳೆ ಎನ್ನುವ ಸೂಚನೆಯನ್ನೂ ಆ ಒಂದು ಸನ್ನಿವೇಶದಲ್ಲೇ ತೋರಿಸುತ್ತಾಳೆ. ಒಂದು ಪಕ್ಷ ಆಕೆಯ ಲೆಕ್ಕಾಚಾರ ತಲೆಕೆಳಗೆ ಮಾಡಿದರೆ ಮಾತ್ರ ಕಥೆಗೊಂದು ಅರ್ಥ ಬರುತ್ತದೆ. ಕಥೆಯನ್ನು ಹಿಗ್ಗಿಸಲು ಆಕೆಯನ್ನು ಕಾಟ ನೀಡುವ ಖಳನಾಯಕಿಯನ್ನಾಗಿ ರೂಪಿಸಿದರೆ ಸುಖ ಸಂಸಾರದ ಕಥೆಗೆ ಕಂಟಕ ಬಂದಂತೆ ಆಗುತ್ತದೆ. ಹಾಗೆ ಆಗದೇ ಇರಲಿ.

—ನಿರ್ಮಲಾ ರಾಮಚಂದ್ರ, ಶಿವಮೊಗ್ಗ